# ಹಿರಾನಿ ಎಂಬ ರಾಜಕುವರ!

ಒಂದು ಸಿನಿಮಾ ಯಶ ಪಡೆದರೆ ಸಾಕು, ಬಾಲಿವುಡ್ ನಿರ್ದೇಶಕರು ಆ ಸೂತ್ರದ ಬಾಲ ಹಿಡಿದು ಹಣ ಮಾಡಲು ಹೊರಡುತ್ತಾರೆ ಎನ್ನುವುದು ಸಾಮಾನ್ಯ ನಂಬಿಕೆ. ಆದರೆ ಈ ರಾಜು ಹಿರಾನಿ ಕಥೆಯೇ ವಿಭಿನ್ನ. 2003ರಲ್ಲಿ ಈತ ನಿರ್ದೇಶಿಸಿದ ಮೊದಲ ಹಿಂದಿ ಸಿನಿಮಾ 'ಮುನ್ನಾಭಾಯಿ ಎಂಬಿಬಿಎಸ್' ಸೂಪರ್ ಹಿಟ್ ಆಯಿತು. ಕೇವಲ ಒಂದು ಕೋಟಿ ರೂಪಾಯಿ ಸುರಿದು ಮಾಡಿದ ಸಿನಿಮಾ, ಭಾರತದಲ್ಲೇ ಎರಡೂವರೆ ಕೋಟಿ ಗಳಿಸಿತು. 10 ವರ್ಷಗಳ ಹಿಂದೆ ಬಾಕ್ಸಾಫೀಸ್ ಮಟ್ಟಿಗೆ ಅದೊಂದು ಹೊಸ ದಾಖಲೆಯೇ. ಆ ಸಿನಿಮಾ ಬಾಲಿವುಡ್‌ನಲ್ಲಿ ಎಲ್ಲ ಸಿದ್ಧಸೂತ್ರಗಳನ್ನೂ ಮೀರಿ ತಯಾರಾಗಿ ಹೀಗೆ ಸೂಪರ್‌ಹಿಟ್ ಆದದ್ದೇ ತಡ, ನಿರ್ಮಾಪಕರು ರಾಜು ಹಿರಾನಿಗೆ ಒಂದೇ ಸಮನೆ ದುಂಬಾಲು ಬಿದ್ದರು. ಸುಮಾರು 35–40 ನಿರ್ಮಾಪಕರು ತಮ್ಮ ಮುಂದಿನ ಚಿತ್ರಕ್ಕಾಗಿ ಹಿರಾನಿಯನ್ನು ಬುಕ್ ಮಾಡಲು ದುಂಬಾಲು ಬಿದ್ದಿದ್ದರು ಎನ್ನುವುದು ಆಗಿನ ವರದಿ! ಆದರೆ ಹಿರಾನಿ ಹೇಳಿದ್ದು ಒಂದೇ ಮಾತು– 'ನನ್ನಲ್ಲಿ ಹೊಸ ಕಥೆ ಇಲ್ಲ. ಸದ್ಯಕ್ಕಂತೂ ಸಾಧ್ಯವಿಲ್ಲ.' ಅದಕ್ಕೂ ಹಲವು ನಿರ್ಮಾಪಕರ ಬಳಿ ಉತ್ತರ ಸಿದ್ಧವಿತ್ತು. 'ಕಥೆ ಆಮೇಲೆ ಹುಡುಕೋಣ, ಈಗ ಹೊಸ ಸಿನಿಮಾಕ್ಕೆ ಸಹಿ ಹಾಕಿ, ತಗೊಳ್ಳಿ ಅಡ್ವಾನ್ಸ್.'

ಸಿನಿಮಾದಲ್ಲಿ ಮಾತ್ರ ಸಿದ್ಧಸೂತ್ರಗಳನ್ನು ಉಲ್ಲಂಘಿಸಿದ್ದಲ್ಲ; ನಿಜಜೀವನದಲ್ಲೂ ಉಲ್ಲಂಘಿಸಿದರು. ಎರಡನೇ ಸಿನಿಮಾ 'ಲಗೇ ರಹೋ ಮುನ್ನಾಭಾಯಿ' ಬರೋದಕ್ಕೆ ಮೂರು ವರ್ಷ ಹಿಡಿಯಿತು. ಅವತ್ತು ಮನಸ್ಸು ಮಾಡಿದ್ದರೆ ರಾಜು ಹಿರಾನಿ ಕೋಟಿಗಟ್ಟಳೆ ದುಡಿಯಬಹುದಿತ್ತು. 'ಹಣ ಒಂದೇ ಜೀವನ ಅಲ್ಲ. ಒಂದು ಸಿನಿಮಾ ಮಾಡಬೇಕು ಅಂತ ನನಗೆ ಅನ್ನಿಸಬೇಕು. ಪ್ರೇಕ್ಷಕರಿಗೆ ಹೇಳಲು ಏನಾದರೂ ವಿಷಯ ಇರಬೇಕು. ಇಲ್ಲವಾದರೆ ನಾನು ಸಿನಿಮಾ ಮಾಡುವುದೇ ಇಲ್ಲ' ಎನ್ನುವುದು ಹಿರಾನಿ ಸ್ಪಷ್ಟೋಕ್ತಿ. ಈಗ 'ಪಿಕೆ' ಎನ್ನುವ ಸಿನಿಮಾ ಮೊದಲ ವಾರದಲ್ಲೇ 200 ಕೋಟಿ ರೂಪಾಯಿಯ ಗಳಿಕೆಯನ್ನು ದಾಟಿ ಎಲ್ಲೆಡೆ ಹೌಸ್‌ಫುಲ್ ಓಡುತ್ತಿರುವಾಗಲೂ ಅದರ ನಿರ್ದೇಶಕ ಹಿರಾನಿ ಹೇಳುವುದು ಅದೇ ಮಾತು.

ರಾಜ್‌ಕುಮಾರ್ ಹಿರಾನಿಯದ್ದು (ಬರ್ತ್‌ಡೇ 20/11/1962) ಸಿನಿಮಾ ಹಿನ್ನೆಲೆಯ ಕುಟುಂಬ ಅಲ್ಲ. ಭಾರತ–ಪಾಕ್ ವಿಭಜನೆಯ ವೇಳೆ ಆತನ ಅಪ್ಪ ಪಾಕಿಸ್ತಾನದ ಸಿಂಧ್‌ನಿಂದ ನಾಗಪುರಕ್ಕೆ ವಲಸೆ ಬಂದಾತ. ಆಗಿನ್ನೂ ಆತನಿಗೆ 14ರ ಹರೆಯ. ನಾಗಪುರದಲ್ಲಿ ಚಿಕ್ಕದೊಂದು ಟೈಪ್‌ರೈಟಿಂಗ್ ಸಂಸ್ಥೆ ಆರಂಭಿಸಿದ. 'ಮಗ ಸಿಎ ಮಾಡಬೇಕು' ಎನ್ನುವುದು ಅಪ್ಪನ ಆಸೆ ಆಗಿತ್ತು. ಆದರೆ ಬಿಕಾಂ ಮುಗಿಸಿದ ರಾಜೂಗೆ ರಂಗಭೂಮಿಯ ತುಡಿತ. ಕೆಲಕಾಲ ನಾಟಕಗಳಲ್ಲಿ ನಟಿಸಿದ್ದೂ ಆಯಿತು. ಸಿನಿಮಾ ನಟ ಆಗಬೇಕೆಂಬ ಆತನ ಆಸೆಗೆ ಅಪ್ಪ ತಣ್ಣೀರೆರಚಲಿಲ್ಲ. ದುಡ್ಡು ಕೊಟ್ಟು ಮುಂಬೈಗೆ ಕಳಿಸಿ ಅಲ್ಲಿ ನಟನೆಯ ಶಾಲೆಯೊಂದಕ್ಕೆ ಸೇರಿಸಿದ. ಆದರೆ ಅಲ್ಲಿ ರಾಜೂ 3 ದಿನವೂ ಬಾಳಿಕೆ ಬರಲಿಲ್ಲ. ವಾಪಸ್ ನಾಗಪುರಕ್ಕೆ ಬಂದಾಗ, 'ಪುಣೆ ಫಿಲಂ ಇನ್ಸ್‌ಟಿಟ್ಯೂಟ್'ಗೆ ಸೇರುವ ಸಲಹೆ ಬಂತು. ಅಲ್ಲಿ ನೋಡಿದರೆ ಅದಾಗಲೇ ನಟನೆಯ ಕೋರ್ಸ್ ಮುಚ್ಚಿತ್ತು. ನಿರ್ದೇಶನ ಕಲಿಯುವ ಕೋರ್ಸಿಗೆ ಸೇರಲು ಯತ್ನಿಸಿದರೆ ಘಟಾನುಘಟಿಗಳ ನಡುವೆ ಅವಕಾಶ ಸಿಗಲಿಲ್ಲ. ಕೊನೆಗೆ ಪುಣೆಯಲ್ಲಿ ಸೇರಿದ್ದು ಎಡಿಟಿಂಗ್ ಕೋರ್ಸಿಗೆ. ಅದೂ ಸ್ಕಾಲರ್‌ಶಿಪ್ ನೆರವಿನಿಂದ.

ಆದರೆ ಎಡಿಟರ್ ಆಗಿ ಬಾಲಿವುಡ್‌ನಲ್ಲಿ ರಾಜು ಹಿರಾನಿಯ ಅನುಭವ ಕಹಿಯಾದದ್ದು. ಹಾಗಾಗಿ ಆತ ಜಾಹೀರಾತು ಕಂಪೆನಿಗೆ ಸೇರಿದ, ಅಲ್ಲೇ ಬೆಳೆದ. ನಿರ್ದೇಶಕ– ನಿರ್ಮಾಪಕನೂ ಆದ. ವಿಧು ವಿನೋದ್ ಚೋಪ್ರಾರ '1942 ಎ ಲವ್ ಸ್ಟೋರಿ' ಚಿತ್ರದ ಟ್ರೈಲರ್‌ಗೆ ಕೆಲಸ ಮಾಡಿದ. 'ಮಿಶನ್ ಕಾಶ್ಮೀರ್' ಚಿತ್ರದ ಎಡಿಟಿಂಗ್ ಮಾಡಿದ.

'90ರ ದಶಕದಲ್ಲಿ ಜೀವನದಲ್ಲಿ ಒಂದು ಸಿನಿಮಾ ನಿರ್ದೇಶಿಸಬೇಕು ಎನ್ನುವ ಆಸೆ ಇತ್ತು. ಅಷ್ಟು ಮಾಡೋದೇ ಬಹಳ ಕಷ್ಟದ ಕೆಲಸ ಆಯಿತು. ಈಗ ನೋಡಿದರೆ ನಿರ್ಮಾಪಕರು ಹಣದ ಥೈಲಿ ಹಿಡಿದು ಬೆನ್ನು ಹತ್ತಿದ್ದಾರೆ. ಭಾರೀ ಹಣ ಸಿಗುತ್ತದೆಂದು ಸಿನಿಮಾ ಮಾಡಲು ಆಗುತ್ತದೆಯೆ? ಒಂದು ಕೆಲಸದಲ್ಲಿ ನಿಮಗೆ ರುಚಿ ಇರಬೇಕು. ಅದಿದ್ದರೆ ಕೆಲಸ ಮಾಡಬಹುದು. ನನ್ನ ಕಥೆಯೂ ಹಾಗೆಯೇ. ಯಾವುದಾದರೂ ಒಂದು ಕಥೆ ಸಿಕ್ಕಿದರೆ ಸಿನಿಮಾ ಬಗ್ಗೆ ಯೋಚಿಸಬಹುದು. ಆದರೆ ಕಥೆಯೇ ಇಲ್ಲದೆ 10–20 ಜನರಿಗೆ ಸಹಿ ಹಾಕುವುದೆಂದರೆ ಹೇಗೆ ಸಾಧ್ಯ? ಬೇರೆಯವರು ಹಾಗೆ ಮಾಡುತ್ತಾರೆಂದು ನನಗಂತೂ ಸಾಧ್ಯವಿಲ್ಲ. ನಾನೊಬ್ಬ ಸಾಮಾನ್ಯ ಮನುಷ್ಯ. ಧಾವಂತ ಇಲ್ಲದ ಜೀವನವನ್ನು ಬಯಸುವವನು' ಎಂದಿದ್ದಾನೆ ಹಿರಾನಿ.



'ತ್ರೀ ಈಡಿಯಟ್ಸ್' ಸೂಪರ್‌ಹಿಟ್ ಆದ ಬಳಿಕ ಹಿರಾನಿಗೂ ಹೊಸ ಕಥೆಯ ಕುರಿತು ಧಾವಂತ ಹುಟ್ಟಿತ್ತು. ಹಾಗಾಗಿ 'ಪಿಕೆ' ತಯಾರಾಗಲು ಮೂರಲ್ಲ, ಆರು ವರ್ಷ ಹಿಡಿಯಿತು! ಈ ಸಿನಿಮಾ ಬಿಡುಗಡೆಗೆ ಮುನ್ನವೇ ಆತನ ಮತ್ತು ನಿರ್ಮಾಪಕರ ಮೇಲೆ ಐದು ಮೊಕದ್ದಮೆಗಳು ದಾಖಲಾಗಿದ್ದವು. ಬಿಡುಗಡೆಯ ಬಳಿಕ ಇನ್ನಷ್ಟು ಕೇಸ್‌ಗಳು ಬಿದ್ದಿವೆ. ಆದರೆ ಹಿರಾನಿ ತನ್ನ ಸಿನಿಮಾ ಶ್ರದ್ಧೆ ಮತ್ತು ಬದುಕಿನ ಧೋರಣೆಗಳಿಂದ ಎಳ್ಳಷ್ಟೂ ಹಿಂಜರಿದಿಲ್ಲ. ಮುಂದಿನ ಸಿನಿಮಾಕ್ಕೆ ಈಗಲೇ ಸಿದ್ಧತೆ ಶುರು ಮಾಡಿದ್ದಾನೆ. ಈಗ ಜೈಲಿನಲ್ಲಿರುವ ಬಾಲಿವುಡ್ ನಟ ಸಂಜಯ್‌ದತ್ ಜೀವನದಿಂದ ಈ ಹೊಸ ಸಿನಿಮಾಕಥೆ ಪ್ರಭಾವಿತವಾಗಿದೆಯಂತೆ. ರಣಬೀರ್ ಕಪೂರ್ ನಾಯಕನಂತೆ. ಸಂಜಯ್ ಜೈಲಿನಿಂದ ಹೊರಬಂದ ಬಳಿಕ ಶೂಟಿಂಗ್ ಅಂತೆ. ಚಿತ್ರ ಯಾವಾಗ ಬೇಕಿದ್ದರೂ ಬರಲಿ– ಅದನ್ನು ನೋಡುವ ದೊಡ್ಡ ಜನಸಾಗರವೇ ಹಿರಾನಿಯನ್ನು ಕಾಯಲು ಸಿದ್ಧವಾಗಿದೆ. ಒಬ್ಬ ಸಿನಿಮಾ ನಿರ್ದೇಶಕನಿಗೆ ಇದಕ್ಕಿಂತ ದೊಡ್ಡ ಭಾಗ್ಯ ಯಾವುದಿದೆ? ಸದ್ಯಕ್ಕಂತೂ ಹಿರಾನಿ ಬಾಲಿವುಡ್‌ಅನ್ನು ಆಳುತ್ತಿರುವ ಅನಧಿಕೃತ ಪ್ರಿನ್ಸ್! ■

Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65